## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 725 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ<br>(ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21.02.2024 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಮಂಡ್ಯ ತಾಲೂಕು, ಕೊತ್ತತ್ತಿ ಹೋಬಳಿ, ಗುತ್ತಲು ಗ್ರಾಮ ಸ.ನಂ.497/6 (ಪ್ರಸ್ತುತ 497/6ಎ2) ರಲ್ಲಿನ 0.38 ಗುಂಟೆ ಮತ್ತು 497/5ಬಿ ರಲ್ಲಿನ 0.07 ಜಮೀನು ಮೈಸೂರು ಸಕ್ಕರೆ ಕಂಪನಿ ಕೆಲಸಗಾರರ ಸಂಘ ರಿ.ನಂ. 39/41 ಇದರ ಅಧ್ಯಕ್ಷರ ಹೆಸರಿನಲ್ಲಿ ದಿನಾಂಕ:17.03.1960ರಲ್ಲಿ ನೋಂದಣಿ ಸಂಖ್ಯೆ ಕ್ರಮವಾಗಿ 6833 ಮತ್ತು 6834 ರಂತೆ ನೋಂದಣಿ ಆಗಿ ಕ್ರಯ ಆಗಿದ್ದು, ಸದರಿ ಸಂಘವು ಅಸ್ತಿತ್ವದಲ್ಲಿಲ್ಲದ ಕಾರಣ ಮೇಲ್ಕಂಡ ಎರಡು ಸ್ವತ್ತುಗಳು "PRINCIPALS OF LAW OF ESCHEAT" ನಿಯಮದಂತೆ ಸರ್ಕಾರದ ಸುಪರ್ದಿಗೆ ಪಡೆದುಕೊಳ್ಳುವ ಸಂಬಂಧ ಉಪ ವಿಭಾಗಾಧಿಕಾರಿ, ಮಂಡ್ಯ ಇವರಿಗೆ ಸದರಿ ಸ್ವತ್ತುಗಳ ವರ್ಗಾವಣೆ ಮತ್ತು ಹಕ್ಕಿನ ಬಗ್ಗೆ ಸಮರ್ಪಕ ವರದಿ ನೀಡುವಂತೆ ಜಿಲ್ಲಾಧಿಕಾರಿಗಳು, ಮಂಡ್ಯ ಇವರು ಸೂಚಿಸಿದ್ದರ ಅನ್ವಯ ಸ್ಪಷ್ಟತೆಯಿಂದ ಕೂಡಿದ ಸಮರ್ಪಕ ವರದಿಯನ್ನು ಸಲ್ಲಿಸಲಾಗಿದೆ; | ಮೈಸೂರು ಸಕ್ಕರೆ ಕಂಪನಿ ಕೆಲಸಗಾರರ ಸಂಘ ಇವರ ಹೆಸರಿಗೆ ನೋಂದಣಿಯಾಗಿರುವ ಮಂಡ್ಯ ತಾಲೂಕು, ಕೊತ್ತತ್ತಿ ಹೋಬಳಿ, ಗುತ್ತಲು ಗ್ರಾಮ ಸ.ನಂ.497/6 (ಪ್ರಸ್ತುತ 497/6ಎ2) ರಲ್ಲಿನ 0-38 ಗುಂಟೆ ಮತ್ತು 497/5ಬಿ ರಲ್ಲಿನ 0-07 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮಂಡ್ಯ ಜಿಲ್ಲಾಧಿಕಾರಿಯವರಿಗೆ ಮಂಡ್ಯ ಉಪ ವಿಭಾಗಾಧಿಕಾರಿಯವರ ಮೂಲಕ ಸ್ವೀಕೃತವಾಗಿದ್ದ ವರದಿಯನ್ನು ಪರಿಶೀಲಿಸಿ 11 ಅಂಶಗಳ ಕುರಿತು ಪೂರಕ ದಾಖಲಾತಿಗಳೊಂದಿಗೆ ವಿಸ್ತೃತವಾದ ವರದಿಯನ್ನು ಸಲ್ಲಿಸುವಂತೆ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿರುತ್ತದೆ. |
| (ಆ) | ಇಲ್ಲವಾದಲ್ಲಿ, ಸದರಿ ವಿಷಯದ ಕುರಿತಾಗಿ ನಾನು ಕಳೆದ ಒಂದು ವರ್ಷದಿಂದ ಪ್ರಶ್ನೆಗಳನ್ನು ಕೇಳುತ್ತಿದ್ದಾಗ್ಯೂ ಸದರಿ ಸ್ವತ್ತುಗಳನ್ನು ಸರ್ಕಾರದ ಸುಪರ್ದಿಗೆ ಪಡೆಯಲು ನಿರ್ಲಕ್ಷ್ಯ ವಹಿಸುತ್ತಿರಲು ಕಾರಣಗಳೇನು; | ವಿಧಾನ ಸಭಾ ಸಾರ್ವತ್ರಿಕ ಚುನಾವಣೆ-2023, ಲೋಕಸಭಾ ಸಾರ್ವತ್ರಿಕ ಚುನಾವಣೆ ಹಾಗೂ ದಕ್ಷಿಣ ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿ ಪರಿಷ್ಕರಣೆ ಹಾಗೂ ಇನ್ನಿತರೆ ಪೂರ್ವಭಾವಿ ಸಿದ್ಧತೆಗಳ ಕುರಿತಂತೆ ತುರ್ತಾಗಿ ಕ್ರಮ ಕೈಗೊಳ್ಳಬೇಕಾದ ಹಿನ್ನೆಲೆಯಲ್ಲಿ ವಿಳಂಬವಾಗಿರುತ್ತದೆ. |
| (ಇ) | ಸದರಿ ಸ್ವತ್ತುಗಳನ್ನು ಸರ್ಕಾರದ ಸುಪರ್ದಿಗೆ ಪಡೆಯಲು ಕಾಲಮಿತಿಯನ್ನೇನಾದರೂ ನಿಗಧಿಗಳಿಸಲಾಗುವುದೇ; | ಯಾವುದೇ ಕಾಲಮಿತಿ ನಿಗದಿಗೊಳಿಸಿರುವುದಿಲ್ಲ. ತಹಶೀಲ್ದಾರ್ ಮಂಡ್ಯ ಹಾಗೂ ಸಂಬಂಧಪಟ್ಟ ಇಲಾಖೆಗಳಿಂದ ಅಗತ್ಯ ದಾಖಲೆಗಳನ್ನು ಪಡೆದು ನಿಯಮಾನುಸಾರ ಕ್ರಮವಹಿಸಲಾಗುವುದು. |
| (ಈ) | ಅದನ್ನು ಕಾರ್ಯರೂಪಕ್ಕೆ ತರಲು ವಿಳಂಬ ಮಾಡುತ್ತಿರುವ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುವುದೇ? | ವಿಳಂಬವಾಗಿರುವುದು ಕಂಡುಬಂದಲ್ಲಿ ಸಂಬಂಧಪಟ್ಟ ಅಧಿಕಾರಿ/ನೌಕರರ ವಿರುದ್ಧ ಸೂಕ್ತ ಶಿಸ್ತು ಕ್ರಮ ಕೈಗೊಳ್ಳಲು ಕ್ರಮವಹಿಸಲಾಗುವುದು. |

(ಕಡತ ಸಂಖ್ಯೆ:ಕಂಇ 10 ಎಲ್‌ಜಿವೈ 2024)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು